ಎನ್. ಜಗನ್ನಾಥ ಪ್ರಕಾಶ್

# ರಂಗಭೂಮಿಯ ಕಾಯಂ ತಾಯಿ



ಹದಿನೈದರ ಹರೆಯದಲ್ಲಿಯೇ ಬಣ್ಣ ಹಚ್ಚಿಕೊಂಡು, ನಿರಂತರ ಐದಾರು ದಶಕಗಳ ಕಾಲ ಕನ್ನಡ ವೃತ್ತಿರಂಗಭೂಮಿಯಲ್ಲಿ ಮಹಿಳೆಯರ ಎಲ್ಲಾ ಬಗೆಯ ಪಾತ್ರಗಳನ್ನು ಅಭಿನಯಿಸಿ ಪುರುಷ ಪಾತ್ರಗಳಲ್ಲೂ ಸೈ ಎನ್ನಿಸಿಕೊಂಡ ಅಪರೂಪದ ಕಲಾವಿದೆ ರೇಣುಕಮ್ಮ ಮುರುಗೋಡು.

ನಾಯಕಿಯಾಗಿ, ಅಜ್ಜಿಯಾಗಿ ಗಮನ ಸೆಳೆದ ರೇಣುಕಮ್ಮ ರಂಗ ವೇದಿಕೆಗೆ ಮೊದಲಿಗೆ ಕಾಲಿಟ್ಟಿದ್ದು ನೃತ್ಯಗಾತಿಯಾಗಿ. ಸಾರ್ವಜನಿಕ ಸಮಾರಂಭಗಳಲ್ಲಿ ನೃತ್ಯ ಪ್ರದರ್ಶನ ನೀಡುತ್ತಿದ್ದ ಇವರು ವೃತ್ತಿರಂಗಭೂಮಿ ಪ್ರವೇಶಿಸುವ ಮುನ್ನ ಅಭಿನಯ ಹಾಗೂ ಸಂಗೀತದಲ್ಲಿ ತರಬೇತಿ ಪಡೆದುಕೊಂಡಿದ್ದರು. ಸುಂದರ ಯುವತಿ ನಾಯಕಿಯ ಪಾತ್ರಕ್ಕೆ ಆಯ್ಕೆಯಾಗಿ ತಮ್ಮ ಹಾಡು–ನಟನೆಯನ್ನು ಸಾಬೀತುಪಡಿಸಿದರೂ ರೇಣುಕಮ್ಮ ಯಾವತ್ತೂ ಯಾವ ನಿರ್ದಿಷ್ಟ ಪಾತ್ರಕ್ಕೂ ಅಂಟಿಕೊಂಡಿರಲಿಲ್ಲ.

ಸುಮಾರು 3–4 ದಶಕಗಳ ಕಾಲ ಪಿ.ಬಿ. ಧುತ್ತರಗಿ ಅವರ ‘ತಾಯಿ ಕರುಳು’ ವೃತ್ತಿ ರಂಗಭೂಮಿಯಲ್ಲಿ ಜಯಭೇರಿ ಬಾರಿಸಿದ ನಾಟಕ. ಒಂದೊಂದು ಕಾಲಘಟ್ಟದಲ್ಲಿ ಒಬ್ಬೊಬ್ಬ ಅಭಿಜಾತ ಕಲಾವಿದರು ಈ ನಾಟಕದ ತಾಯಿ ಪಾತ್ರಕ್ಕೆ ದಕ್ಕುತ್ತಿದ್ದರು. 1960–70ರ ದಶಕಗಳಲ್ಲಿ ‘ತಾಯಿ ಕರುಳು’ ನಾಟಕದಲ್ಲಿ ತಾಯಿಯಾಗಿ ಪ್ರೇಕ್ಷಕರ ಮನ ಕರಗುವಂತೆ ಅಭಿನಯಿಸಿ ಖ್ಯಾತಿ ಪಡೆದರು ರೇಣುಕಮ್ಮ. ಹಳ್ಳಿಯೇ ಆಗಲಿ ಪಟ್ಟಣ, ನಗರವೇ ಆಗಲಿ ‘ತಾಯಿ’ ಪಾತ್ರಗಳಿಗೆ ಗಟ್ಟಿತನ ತಂದುಕೊಟ್ಟ ಅವರು ಮುಂದೆ ತಾಯಿ ಪಾತ್ರಗಳನ್ನು ಕಾಯಮ್ಮಾಗಿ ನಿರ್ವಹಿಸಲು ಶುರು ಮಾಡಿದರು.

ಬಹುತೇಕ ಎಲ್ಲಾ ವೃತ್ತಿ ರಂಗಭೂಮಿ ಕಲಾವಿದರಂತೆ ಮೊದ ಮೊದಲಿಗೆ ಪೌರಾಣಿಕ ಪಾತ್ರ ಗಳಲ್ಲಿ ಕಾಣುತ್ತಿದ್ದ ರೇಣುಕಮ್ಮ ಮಧುರಗಾಯನದಿಂದಲೂ ಗಮನ ಸೆಳೆದರು. ಅನೇಕ ಕಂಪೆನಿಗಳಲ್ಲಿ ‘ತಾಯಿ ಕರುಳು’ ನಾಟಕಗಳಲ್ಲಿ ‘ತಾಯಿ’ ಪಾತ್ರ ನಿರ್ವಹಿಸಿದ್ದ ಅವರು ಗುಡಿಗೇರಿ ಬಸವರಾಜರ ‘ರೈತನ ಮಕ್ಕಳು’ ನಾಟಕದಲ್ಲಿ ತಾಯಿ ಪಾತ್ರದಲ್ಲೇ ಕಾಣಿಸಿಕೊಂಡರು. ಈ ನಾಟಕದಲ್ಲಿ ತಾಯಿ ಪಾತ್ರಕ್ಕೂ ವರ್ಚಸ್ಸು ತಂದುಕೊಟ್ಟಿದ್ದು ಅವರ ಹೆಗ್ಗಳಿಕೆ.

ವೃತ್ತಿ ರಂಗಭೂಮಿಯಲ್ಲಿ ಐದಾರು ದಶಕಗಳ ಕಾಲ ನಿರಂತರವಾಗಿ ಸ್ಥಾನ ಕಾಯ್ದುಕೊಂಡಿದ್ದ ರೇಣುಕಮ್ಮ ನಾಲ್ಕೈದಕ್ಕೂ ಹೆಚ್ಚು ಕಂಪೆನಿಗಳಲ್ಲಿ ಕೆಲಸ ಮಾಡಿದರು. ಯಾವುದೇ ನಾಟಕವಾಗಲಿ, ಯಾವುದೇ ಪಾತ್ರವಾಗಲಿ ಅದನ್ನು ಶ್ರದ್ಧೆಯಿಂದ ನಿರ್ವಹಿಸುತ್ತಿದ್ದರು. ಈ ಅಂಶವೇ ಅವರು ಬಹಳ ಕಾಲ ಬೇಡಿಕೆಯ ಕಲಾವಿದೆಯಾಗಿದ್ದಕ್ಕೆ ಕಾರಣವಾಗಿತ್ತು.

‘ಬಂಜೆ ತೊಟ್ಟಿಲು’, ‘ರತ್ನ ಮಾಂಗಲ್ಯ’ ನಾಟಕಗಳಲ್ಲಿ ತುಸು ಭಿನ್ನವಾದ ಪಾತ್ರಗಳಲ್ಲಿ